

# ಪ್ರಕೃತಿ ವಿಸ್ಮಯ ಗಂಡೀಕೋಟಾ

**ಒಂದು ಕಾಲದಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ರಾಜ ಸಂಸ್ಥಾನದ ಕೋಟೆಯ ಸದ್ಯದ ಸ್ಥಿತಿಯನ್ನು ಕಾಣುವಾಗ ಹೃದಯ ಚುರುಗುಟ್ಟುತ್ತದೆ. ಕೋಟೆಯೊಳಗೆ ಮನೆ– ಬಿಡಾರ ಮಾಡಿಕೊಂಡವರು ಯಾರೂ ಇಲ್ಲಿನ ಕಟ್ಟಡಗಳ ಬಗ್ಗೆಯಾಗಲೀ, ಪ್ರದೇಶವನ್ನು ಸ್ವಚ್ಛವಾಗಿಡುವ ಬಗ್ಗೆಯಾಗಲೀ ಗಮನ ಹರಿಸಿಲ್ಲ. ಆಂಧ್ರ ಸರಕಾರವೂ ಪೂರ್ಣ ನಿರ್ಲಕ್ಷ್ಯ ತಾಳಿದೆ.**

**★ ಚಿತ್ರ- ಲೇಖನ: ಎಸ್.ಎನ್.ರಾವ್, ಕಡಂದಲೆ**

ಮದ್ದುಗುಂಡು, ಕೋವಿ, ವಿಮಾನ, ಬಾಂಬ್, ಕ್ಷಿಪಣಿ ಮುಂತಾದ ವಿಜ್ಞಾನದ ಆವಿಷ್ಕಾರಗಳು ಒಂದು ರಾಷ್ಟ್ರದ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದು ಇತ್ತೀಚಿನ ವಿದ್ಯಮಾನ. ಅದಕ್ಕಿಂತ ಮೊದಲು ಪ್ರಾಕೃತಿಕ ಲಕ್ಷಣಗಳಾದ ಪರ್ವತ ಶ್ರೇಣಿಗಳು, ಕಡಿದಾದ ಬಂಡೆಗಳ ಸಮೂಹ, ಆಳನದಿಗಳು ಮತ್ತು ಕಡಿದಾದ ಕಣಿವೆಗಳು ಒಂದು ದೇಶದ ಅಥವಾ ಸಾಮ್ರಾಜ್ಯದ ರಕ್ಷಣಾ ವ್ಯವಸ್ಥೆಯಲ್ಲಿ ಮಹತ್ತರವಾದ ಪಾತ್ರಗಳನ್ನು ವಹಿಸುತ್ತಿದ್ದವು.

ಶಿವಾಜಿಯ ಭದ್ರಕೋಟೆಗಳು, ಚಿತ್ರದುರ್ಗದ ಬಂಡೆಗಳ ಮೇಲಿನ ಕೋಟೆ, ಯಾದಗಿರಿಯ ಕೋಟೆ, ಕಾವೇರಿ ನದಿಯ ಕವಲುಗಳ ನಡುವೆ ಇದ್ದ ಟಿಪ್ಪು ಸುಲ್ತಾನನ ಕೋಟೆ, ಸಮುದ್ರ ಮತ್ತು ಕಣಿವೆಗಳ ನಡುವೆ ಇರುವ ಬೇಕಲಕೋಟೆ ಮುಂತಾದವು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಆಧುನಿಕ ಯುದ್ಧತಂತ್ರಗಳ ಆವಿಷ್ಕಾರದೊಂದಿಗೆ ಈ ಕೋಟೆ ಕೊತ್ತಲಗಳು ನಾಶವಾಗಿ ಸಾಮ್ರಾಜ್ಯ, ಸಂಸ್ಥಾನಗಳು ನಾಮಾವಶೇಷವಾದವು.

ಗಂಡೀಕೋಟಾ ಇದು ಇಂತಹುದೇ ಒಂದು ಸಂಸ್ಥಾನ. ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಪೆನ್ನಾ ನದಿ ಹಾಗೂ ಎರಮಲ ಬೆಟ್ಟಗಳ ನಡುವೆ ಇದ್ದ ಈ ಸಂಸ್ಥಾನವನ್ನು ಕ್ರಿ.ಶ. 1123ರಲ್ಲಿ ಕಾಪರಾಜನೆಂಬವನು ಸ್ಥಾಪಿಸಿದನು. ಕಲ್ಯಾಣ ಚಾಲುಕ್ಯ ದೊರೆಯಾಗಿದ್ದ ಒಂದನೆಯ ಆಹವಮಲ್ಲ ಸೋಮೇಶ್ವರನ ಸಾಮಂತ ದೊರೆಯಾಗಿದ್ದ ಈ ಕಾಪರಾಜನು ತನ್ನ ಸಂಸ್ಥಾನಕ್ಕೆ ಒಂದು ಕಡೆಯಿಂದ ಪೆನ್ನಾ ನದಿ, ಇನ್ನೊಂದು ಕಡೆಯಿಂದ ಎರಮಲ ಬೆಟ್ಟಗಳಿರುವುದು ಸೂಕ್ತ ರಕ್ಷಣೆಯೆಂದು ಭಾವಿಸಿದ್ದನು. ಈ ಸಂಸ್ಥಾನವು ಮುಂದೆ ಕಾಕತೀಯ ದೊರೆಗಳ ಮತ್ತು ವಿಜಯನಗರ ಅರಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಕಂಡಿತು. ಪೆಮ್ಮಸಾನಿ ಬೊಮ್ಮನಾಯುಡು ಎಂಬ ದೊರೆಯ ಕಾಲದಲ್ಲಿ ರಕ್ಷಣಾ

